ಕನ್ನಡಿಗರು, ಆ ಜನರನ್ನು ಹೊರಗಡೆ ಹಾಕಿದರು. ಅದಾದ ಮೇಲೆ ಈಗ ಗೋವಾದಲ್ಲಿರುವಂತಹ ಎಲ್ಲಾ ಕಸವನ್ನು ಕರ್ನಾಟಕದ ಮೇಲೆ ಸುರಿಯುತ್ತಿದ್ದಾರೆ. ಇದರ ಬಗ್ಗೆ ನಮ್ಮ ಸರ್ಕಾರ ಕೇಳಿಲ್ಲ. ಇದರ ಜೊತೆಗೆ ಕಳಸಾ–ಬಂಡೂರಿ ಬಗ್ಗೆ ಏನು ನಿರಂತರವಾದಂತಹ ಒತ್ತಾಯ ಆ ಪ್ರದೇಶದ ಜನ ಹಾಕುತ್ತಿದ್ದಾರೆ. ಇದರ ಬಗ್ಗೆ ಮೊನ್ನೆಯು ತಾವು ದೆಹಲಿಗೆ ಹೋಗಿದ್ದೀರಿ. ನಿಮ್ಮ ಮಾತುಕತೆಯು ವಿಫಲವಾಯಿತು ಎಂದು ಬಂದಿದೆ. ಅದರಿಂದಾಗಿ ಬರಸಿಡಿಲು ಬಡಿದಂತಾಗಿದೆ. ಈ ಬಗ್ಗೆ ಮೂರು ವಿಚಾರಗಳ ಬಗ್ಗೆ, ತಾವು ಸ್ಪಷ್ಟವಾಗಿ ಅವರು ಗೋವಾ ಮುಖ್ಯಮಂತ್ರಿಗಳ ಜೊತೆಯಲ್ಲಿ ಭೇಟಿ ಮಾಡಿ ಅವರ ವಿಚಾರವೇನು? ಅಥವಾ ಕರ್ನಾಟಕದ ಮೇಲೆ ಶತೃತ್ವ ಮಾಡಬೇಕೆನ್ನುವಂತಹ ಉದ್ದೇಶವಿದೆಯೇ? ಪ್ರಾಮಾಣಿಕತೆ ಇದೆಯಾ? ಏನು ಎಂಬುದನ್ನು ತಾವು ಕೇಳಬೇಕು. ಇದು ಉದ್ದೇಶಪೂರ್ವಕವಾಗಿ ಗೋವಾ ಸರ್ಕಾರ ನಡೆದುಕೊಳ್ಳುತ್ತಿದೆ. ಇದು ಒಳ್ಳೆಯ ಸೂಚನೆಯಲ್ಲ. ಆದ್ದರಿಂದ ಮಾನ್ಯ ಈಶ್ವರಪ್ಪನವರು ಇದರ ಬಗ್ಗೆ .....

ಶ್ರೀ ಕೆ.ಎಸ್. ಈಶ್ವರಪ್ಪ (ನೀರಾವರಿ ಸಚಿವರು) : ಅವರು ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಾ?

ಉಪಾಧ್ಯಕ್ಷರು : ಈಗ ಅವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಅವರು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಇದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ. ಆಯಿತು ಕುಳಿತುಕೊಳ್ಳಿ. ಈಗ ಸದನವನ್ನು ಮಧ್ಯಾಹ್ನ 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸಭೆಯು 2 ಗಂಟೆ 2 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸಭೆಯು ಮತ್ತೆ 3–27 ಗಂಟೆಗೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ ಶ್ರೀ ಕೃಷ್ಣ ಅವರು ಪೀಠವನ್ನು ಅಲಂಕರಿಸಿದರು).

(ಈ) ಅಧ್ಯಕ್ಷರ ಅಪ್ಪಣೆ ಮೇರೆಗೆ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸಿಮೆಂಟ್ ಫ್ಯಾಕ್ಟರಿಯಿಂದ ಸಿಮೆಂಟನ್ನು ರಾಜ್ಯದ ನಾನಾ ಭಾಗಗಳಿಗೆ ಸಾಗಿಸುತ್ತಿರುವುದರಿಂದ ರಸ್ತೆಗಳು ಹಾಳಾಗಿರುವ ಬಗ್ಗೆ.

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ : ಮಾನ್ಯ ಅಧ್ಯಕ್ಷರೆ, ನಾನು ಚಿತ್ತಾಪುರದ ಈ ರೈಲ್ವೆ.....

ಅಧ್ಯಕ್ಷರು : ನಾನು ಅವಕಾಶವನ್ನು ಕೊಡುತ್ತೇನೆ. ಶೂನ್ಯವೇಳೆಯಲ್ಲಿ ಅನೇಕ ಜನ ಸದಸ್ಯರು ಮಾತನಾಡುವವರು ಇದ್ದಾರೆ.

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ : ಇದೊಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬಿಡಿ.

ಅಧ್ಯಕ್ಷರು : ನಮ್ಮ ಮಾತು ಕೇಳಿಯಪ್ಪ. ನೀವು ರೆಫರೆನ್ಸ್ ಮಾಡಿದರೆ ಮಾನ್ಯ ಮಂತ್ರಿಗಳು ಒಂದು ಉತ್ತರವನ್ನು ಕೊಡುತ್ತಾರೆ. ಆದರೆ ಅದರ ಮೇಲೆಯೇ ಚರ್ಚೆ ಮಾಡಿದರೆ ಸರಿಯಾಗುವುದಿಲ್ಲ.

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ : ಚರ್ಚೆ ಇಲ್ಲ. ಯಾರೂ ಭಾಗವಹಿಸುವುದಿಲ್ಲ ಸಾರ್. ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ ಸಾರ್.

ಅಧ್ಯಕ್ಷರು : ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಕಾಲಿಂಗ್ ಅಟೆನ್‌ಷನ್ ಇದೆ. ಅರ್ಧ ಗಂಟೆ ಚರ್ಚೆ ಇದೆ. ಎಲ್ಲರಿಗೂ ಅವಕಾಶವನ್ನು ಕೊಡಬೇಕಾಗುತ್ತದೆ. ಇವತ್ತು ಕೊನೇ ದಿನ. ಆದ್ದರಿಂದ ಯಾರೂ ಎರಡು ನಿಮಿಷದ ಮೇಲೆ ಅವಕಾಶ ತೆಗೆದುಕೊಳ್ಳಬಾರದೆಂದು ನಾನು ವಿನಂತಿ ಮಾಡುತ್ತೇನೆ. ನೀವು ಶುರುಮಾಡಿ.

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕು ಮತ್ತು ಸುತ್ತಮುತ್ತಲಿನ ಭಾಗದಲ್ಲಿ ಬಹಳಷ್ಟು ಸಿಮೆಂಟ್ ಫ್ಯಾಕ್ಟರಿಗಳಿದ್ದು ಆ ಫ್ಯಾಕ್ಟರಿಯಲ್ಲಿ ತಯಾರಾಗುವ ಸಿಮೆಂಟನ್ನು ದೇಶದ ಮೂಲೆ ಮೂಲೆಗೆ ಸಾಗಿಸಲಾಗುತ್ತಿದೆ. ಅದಲ್ಲದೇ, ಸುಮಾರು 300 ರಿಂದ 400 ಕೋಟಿ ರೂಪಾಯಿಗಳನ್ನು ನಾವು ಸೆಂಟ್ರಲ್ ಗೌರ್ನಮೆಂಟ್‌ಗೆ ಸೆಂಟ್ರಲ್ ಎಕ್ಸೈಜ್ ಎಂದು ತುಂಬುತ್ತಿದ್ದೇವೆ. ಅದೇ ರೀತಿಯಾಗಿ ರಾಜ್ಯ ಸರ್ಕಾರಕ್ಕೂ ಕೂಡ 150 ರಿಂದ 200 ಕೋಟಿ ರೂಪಾಯಿಗಳವರೆಗೆ ನಾವು ಟ್ಯಾಕ್ಸನ್ನು ತುಂಬುತ್ತೇವೆ. ಮತ್ತು ಆ ದಾರಿಯಲ್ಲಿ ಫ್ಯಾಕ್ಟರಿಗಳಲ್ಲಿ ತಯಾರಾಗುವ ಸಿಮೆಂಟನ್ನು ಲಾರಿಗಳ ಮೂಲಕ ಬೇರೆ ಬೇರೆ ರಾಜ್ಯಗಳಿಗೆ ಇಡೀ ದೇಶದ ತುಂಬೆಲ್ಲಾ ಹೋಗುತ್ತಿದೆ. ಪ್ರತಿಯೊಂದು ಲಾರಿ ಕನಿಷ್ಟ ಅಂದರೆ 40 ಕ್ಕಿಂತ ಹೆಚ್ಚು ಟನ್ಸ್ ಸಿಮೆಂಟನ್ನು ಹೊತ್ತುಕೊಂಡು ಹೋಗುತ್ತದೆ. ಹೀಗಾಗಿ ನಮ್ಮ ಚಿತ್ತಾಪುರ ತಾಲ್ಲೂಕು ಮತ್ತು ಸುತ್ತಲಿನ ಭಾಗದಲ್ಲಿ ಎಲ್ಲಾ ರಸ್ತೆಗಳು ಹಾಳಾಗಿ ಹೋಗಿದೆ. ಪಿಡಬ್ಲ್ಯೂಡಿಯ ಪ್ರಮುಖವಾಗಿ ಎಂಡಿಆರ್ ರಸ್ತೆಗಳು ರಿಪೇರಿ ಮಾಡಿ ಇನ್ನೇನು ಒಂದು ತಿಂಗಳು ಕೂಡ ಆಗಿರುವುದಿಲ್ಲ ಮತ್ತು ಅದು ಪೂರ್ತಿಯಾಗಿ ಹಾಳಾಗಿ ಹೋಗುತ್ತದೆ. ಹೀಗಾಗಿ ನಾವು ಮೇಲಿಂದ ಮೇಲೆ ರಿಪೇರಿಯನ್ನೂ ಮಾಡುವುದಕ್ಕಾಗುತ್ತಿಲ್ಲ. ಮಾಡಿದರೂ ಕೂಡ ರೋಡು ಸಸ್ಟೈನ್ ಆಗುತ್ತಿಲ್ಲ. ಹಾಗಾಗಿ ಈ ರಸ್ತೆಗಳನ್ನು ಮೆಂಟೇನೆನ್ಸ್ ಮಾಡುವುದಕ್ಕೆ ನಾವು ಪಿಡಬ್ಲ್ಯೂಡಿ ಮತ್ತು ಎಸಿಸಿ ಕಂಪನಿಯಿಂದ ಕಾಸ್ಟ್ ಷೇರಿಂಗನ್ನು ಮಾಡಿ ಸಿಮೆಂಟ್ ರಸ್ತೆಗಳನ್ನಾಗಿ ಮಾಡಿ ನಾವು ಅಭಿವೃದ್ಧಿ ಮಾಡಿದಾಗ ಮಾತ್ರ ಆ ಭಾಗದಲ್ಲಿ ರೋಡುಗಳು ಉಳಿಯಲಿಕ್ಕೆ ಸಾಧ್ಯ ಇದೆ. ಅದಕ್ಕೆ ಸನ್ಮಾನ್ಯ ಅಧ್ಯಕ್ಷರ ಮೂಲಕ ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ತಾವು ಎಸಿಸಿ ಕಂಪನಿಯವರನ್ನು ಮತ್ತು ಆ ಭಾಗದ ಶಾಸಕರನ್ನು ಕೂಡಿಸಿ ಯಾವ ರೀತಿಯಾಗಿ ರಸ್ತೆ ಅಭಿವೃದ್ಧಿ ಮಾಡಬೇಕೆಂದು ಚರ್ಚೆಯಾಗಬೇಕು. ನಾವು ಆ ಭಾಗದಿಂದ ಟ್ಯಾಕ್ಸ್‌ನ್ನು ಕೊಡುತ್ತಿದ್ದೇವೆ. ಎಸಿಸಿ ಕಂಪನಿಯವರೇ ಸುಮಾರು ಪ್ರತಿ ವರ್ಷ ಕೇಂದ್ರ ಮತ್ತು ರಾಜ್ಯಕ್ಕೆ 500 ಕೋಟಿ ರೂಪಾಯಿಗಿಂತ ಹೆಚ್ಚಿನ ಟ್ಯಾಕ್ಸ್‌ನ್ನು ಕೊಡುತ್ತಿದ್ದೇವೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿದ್ದಾರೆ. ನಮಗೆಷ್ಟು ತೊಂದರೆಯಾಗಿದೆ ಎಂದರೆ ನಾವು ಹೋಗುವಾಗ ಜನರು ನಮಗೆ .....

ಅಧ್ಯಕ್ಷರು : ರೆಫರನ್ಸ್ ಆಯಿತಲ್ಲಾ ಬಿಡಿ.

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ : ನಾವು ಹೋಗುವಾಗ ಜನ ನೋಡ್ರಿ ಎಂಎಲ್ಎ ಅವರೇ ರಸ್ತೆ ಹೇಗಿದೆ ಅಂತ ಅನ್ನುವಂತಹ ಪರಿಸ್ಥಿತಿ ಇದೆ. ಈಗ ಮುಖ್ಯಮಂತ್ರಿಗಳಿಗೆ ಶ್ರದ್ಧೆ ಇದೆ. ಈ ಸಮಸ್ಯೆಯನ್ನು ಯಾವ ರೀತಿಯಾಗಿ ಅವರು ಪರಿಹರಿಸಬಹುದೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳಿಗೆ ನಾನು ತಿಳಿಸಲು ಇಷ್ಟಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) : ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಇದರ ಬಗ್ಗೆ ಇಲ್ಲಿ ಉತ್ತರ ಒದಗಿಸುತ್ತಿದ್ದೇನೆ. ಗುಲ್ಬರ್ಗ ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ದಿನಾಂಕ 7–10–2005 ರಂದು ಗುಲ್ಬರ್ಗ ಪ್ರಾದೇಶಿಕ ಸಾರಿಗೆ ಕಚೇರಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಿಮೆಂಟ್ ಕಾರ್ಖಾನೆಗಳಿಗೆ ಪತ್ರ ಬರೆದು ನಿಗದಿತ ಭಾರಕ್ಕಿಂತ ಹೆಚ್ಚು ಭಾರ ನೀಡಬಾರದೆಂದು ಸೂಚಿಸಿರುತ್ತಾರೆ. ಕಾರ್ಖಾನೆ ಮೂಲದಿಂದಲೇ ನಿಯಂತ್ರಣ ಜಾರಿಗೆ ತಂದಲ್ಲಿ ಕೇಂದ್ರ ಮೋಟಾರು ವಾಹನ ಕಾಯ್ದೆ 113 ಮತ್ತು 114ನ್ನು ಮಾರ್ಗ ಮಧ್ಯದಲ್ಲಿ ಜಾರಿಗೆ ತರುವುದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿದಂತಾಗುತ್ತದೆಂದು ತಿಳಿಸಿರುತ್ತಾರೆ. ಎಸಿಸಿ ಸಿಮೆಂಟ್ ಫ್ಯಾಕ್ಟರಿಯವರು ದಿನಾಂಕ 23–3–2006 ರಂದು ಗುಲ್ಬರ್ಗ ಸಾರಿಗೆ ಪ್ರಾದೇಶಿಕ ಕಚೇರಿಗೆ ಪತ್ರ ಬರೆದು ಅಧಿಕ ಭಾರ ಸಿಮೆಂಟನ್ನು ನೀಡುತ್ತಿಲ್ಲವೆಂದು ಘೋಷಿಸಿರುತ್ತಾರೆ. 2004–05ನೇ ಸಾಲಿನಲ್ಲಿ ಗುಲ್ಬರ್ಗ ಪ್ರಾದೇಶಿಕ ಸಾರಿಗೆ ವ್ಯಾಪ್ತಿಯಲ್ಲಿ 377 ಪ್ರಕರಣಗಳನ್ನು ದಾಖಲಿಸಿ 12,82,360/– ರೂಗಳನ್ನು ಅದರಂತೆ 2005–06 ವ್ಯಾಪ್ತಿಯಲ್ಲಿ 264 ಪ್ರಕರಣಗಳನ್ನು ದಾಖಲಿಸಿ 15,98,960/– ರೂಗಳ ದಂಡ ವಸೂಲಿ ಮಾಡಲಾಗಿದೆ. ಇವತ್ತೇನು ಶಾಸಕರು ಇನ್ನೂ ಹಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅತಿ ಹೆಚ್ಚು ಭಾರ ಹಾಕುವ ಮೂಲಕ ರಸ್ತೆಗಳನ್ನು ದುರ್ಬಲ ಗೊಳಿಸುತ್ತಿರುವ ಬಗ್ಗೆ, ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಸರ್ಕಾರ ಕೈಗೊಳ್ಳುವುದು.

ಅಧ್ಯಕ್ಷರು : ಎಸಿಸಿ ಸಿಮೆಂಟ್ಸ್ ಇದೆಯಲ್ಲ. ಅವರು ಮತ್ತು ಆ ಪ್ರದೇಶದ ಶಾಸಕರನ್ನೆಲ್ಲ ಕೂರಿಸಿ ಸಿಮೆಂಟ್ ರಸ್ತೆ ಮಾಡಿಸುವ ಬಗ್ಗೆ ಏನಾದರೂ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಆ ಕಂಪನಿಯವರನ್ನೂ ಕರೆಸಿ ಅವರ ಜತೆ ಮಾತನಾಡಿ ಅವರೇನಾದರೂ ಶೇರ್ ಮಾಡುವುದಾದರೆ ನೋಡೋಣ.

ಅಧ್ಯಕ್ಷರು : ಮುಂದಿನದು ಅರಗ ಜ್ಞಾನೇಂದ್ರ.

(ಉ) ರಾಜ್ಯದಲ್ಲಿ ಸಿಮೆಂಟ್, ಕಬ್ಬಿಣ, ಟಾರ್ ಬೆಲೆ ಹೆಚ್ಚಾಗಿ ರಸ್ತೆ ಕಟ್ಟಡಗಳ ಕೆಲಸ ಸ್ಥಗಿತವಾಗಿರುವ ಬಗ್ಗೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ಒಂದು ಆತಂಕದ ಸ್ಥಿತಿ ಇದೆ. ಏನೆಂದರೆ ಅಭಿವೃದ್ಧಿಗಾಗಿ ಟಾರ್ ರಸ್ತೆ, ಕಟ್ಟಡಗಳಿಗೆ ಸಿಮೆಂಟ್, ಕಬ್ಬಿಣ – ಇವುಗಳ ಬೆಲೆ, ಟಾರ್‌ನ ಬೆಲೆ ಕಳೆದ ಎರಡು ತಿಂಗಳಿಂದ ಮೂರು ನಾಲ್ಕು ಹಂತದಲ್ಲಿ